Age of Retirement of Teachers

110. **Smt. NAGARATHNAMMA HIREMATH** (Gandhinagar).—

Will the Minister for Agriculture and Education be pleased to state:—

(*a*) whether the age of retirement of teachers in the Bangalore University and the Department of Public Instruction has been fixed at 58 years;

(*b*) whether any representation has been made to the Minister for Education by the teaching staff of the Collegiate Education and Technical Education Departments stating that it is not correct to have fixed the age of retirement of Teachers of these Departments only at 55 years and that there should be uniformity in all the Departments of Education?

A.—**Sri K. V. SHANKARA GOWDA** (Minister for Agriculture and Education).—

(*a*) In Bangalore University, the age of retirement of all teachers is 58. In the Department of Public Instruction teachers of Class III and Class II Cadre retire at 58. Class I officers retire at 55. In Collegiate Education and Technical Education Departments all teachers retire at 55.

(*b*) No.

ಶ್ರೀಮತಿ ನಾಗರತ್ನಮ್ಮ ಹಿರೇಮಠ್.—ವಿದ್ಯಾ ಇಲಾಖೆ ಮತ್ತು ವಿಶ್ವವಿದ್ಯಾನಿಲಯದ ಅಧ್ಯಾಪಕ ವರ್ಗದವರ ನಿವೃತ್ತಿ ವಯಸ್ಸು 58 ಎಂದು ಹೇಳಿದ್ದೀರಿ. ತಾಂತ್ರಿಕ ಶಿಕ್ಷಣದವರಿಗೆ 55 ಅಂತ ಹೇಳಿದ್ದೀರಿ. ಅವರಿಗೂ ಇವರಿಗೂ ಇರತಕ್ಕ ತಾರತಮ್ಯ ವ್ಯತ್ಯಾಸ ಏನು?

ಶ್ರೀ ಕೆ. ವಿ. ಶಂಕರಗೌಡ.—ತಾರತಮ್ಯ ಇದೆ. ವಿದ್ಯಾಭ್ಯಾಸ ಇಲಾಖೆಯಲ್ಲಿ 3ನೇ ಗ್ರೇಡ್ ಮತ್ತು 2ನೇ ಗ್ರೇಡ್ ಟೀಚರ್ಸ್‌ಗೆ ಮಾತ್ರ 58 ಅಂತ ಮಾಡಿದೆ. ಅವರಿಗೆ ಸಾಕಾದಷ್ಟು ಪೆನ್‌ಷನ್ ಬರುವುದಿಲ್ಲ, ಸಂಬಳ ಹೆಚ್ಚಿಗೆ ಬರುವುದಿಲ್ಲ. ಜೆಕ್ನಿಕಲ್ ಕಾಲೇಜಿನಲ್ಲಿರುವವರಿಗೆ ಹೆಚ್ಚು ಸಂಬಳ ಬರುತ್ತದೆ ಮತ್ತು ಬೇರೆ ಸೌಲಭ್ಯ ಇದೆ, ಆದ್ದರಿಂದ ಈ ವ್ಯತ್ಯಾಸ ಇದೆ.

Sri RAJA PID NAIK.—May I know whether Government will give them re-employment or extension if they are found fit for service?

Sri K. V. SHANKARA GOWDA.—Not in all cases; in extraordinary cases, we may consider it.

ಶ್ರೀ ಎ. ಎಲ್. ಪಾಟೀಲ್.—ಕೆಲವರಿಗೆ ನಿವೃತ್ತಿಯ ಅವಧಿಯನ್ನು 55 ವರ್ಷಕ್ಕೆ ನಿಗದಿ ಮಾಡಿ ಇನ್ನು ಕೆಲವರಿಗೆ 58 ವರ್ಷ ಮಾಡಿದರೆ ಅದು ಪಕ್ಷಪಾತವಾಗುವುದಿಲ್ಲವೇ?

ಶ್ರೀ ಕೆ. ವಿ. ಶಂಕರಗೌಡ.—ಆ ಪಕ್ಷಪಾತದ ಪ್ರಶ್ನೆ ಇಲ್ಲಿ ಬರುವುದಿಲ್ಲ. ಅವರಿಗೆ ಹೆಚ್ಚು ವಯಸ್ಸಾದಷ್ಟೂ ಅವರಿಗೆ ಈ ಬಾಬಿನಲ್ಲಿ ಹೆಚ್ಚಿನ ಅನುಭವ ಇರುತ್ತದೆಂಬುದನ್ನು ತೀರ್ಮಾನ ಮಾಡಿ ಅದಕ್ಕೆ ಅನುಗುಣವಾಗಿ ಇದನ್ನು ಜಾರಿಗೆ ತರಲಾಗಿದೆ.

ಶ್ರೀ ಎಂ. ಎಸ್. ಕೃಷ್ಣನ್.—ಕೇರಳ ಮತ್ತು ಉತ್ತರ ಪ್ರದೇಶ ಈ ಕಡೆಗಳಲ್ಲೆಲ್ಲಾ ಹೀಗೆ ಒಂದೇ ವರ್ಗದಲ್ಲಿ ಎರಡು ವಿಧವಾದ ವ್ಯತ್ಯಾಸಗಳಿರುವುದು ಸರಿಯಲ್ಲವೆಂದು ಹಾಗೂ ಈ ಬಗ್ಗೆ ಸುಪ್ರೀಂಕೋರ್ಟಿನಲ್ಲಿ ರಿಟ್ ಬಿದ್ದು ಎಲ್ಲರಿಗೂ ಅಧ್ಯಾಪಕ ವರ್ಗದಲ್ಲಿ 58 ವರ್ಷ ಮಿತಿ ಇರಬೇಕೆಂದು ತೀರ್ಮಾನವಾಗಿರತಕ್ಕದ್ದು ತಮ್ಮ ಗಮನಕ್ಕೆ ಬಂದಿಲ್ಲವೇ?

ಶ್ರೀ ಕೆ. ವಿ. ಶಂಕರಗೌಡ.—ಇಲ್ಲಿಯವರೆಗೂ ಯಾವ ಹುದ್ದೆಗೆ 55 ವರ್ಷ ಇರಬೇಕು, ಯಾವ ಹುದ್ದೆಗೆ 58 ವರ್ಷ ಇರಬೇಕು ಎಂಬುದನ್ನು ತೀರ್ಮಾನ ಮಾಡಿ ಆದರಂತೆ ಅದನ್ನು ಮುಂದುವರಿಸಿಕೊಂಡು ಬರಲಾಗುತ್ತಿದೆ. ಇದನ್ನು ಮತ್ತೆ ಪರಿಶೀಲನೆ ಮಾಡಬೇಕಾದ ಪ್ರಮೇಯ ಬಂದರೆ ಆಗ ಅದನ್ನು ಆಲೋಚನೆ ಮಾಡೋಣ.

ಶ್ರೀ ನಿ. ಕೆ. ರಾಜಯ್ಯಶೆಟ್ಟಿ.—ವಿದ್ಯಾವಂತರು ಸಹಸ್ರಾರು ಸಂಖ್ಯೆಯಲ್ಲಿ ಕೆಲಸವಿಲ್ಲದೆ ಅಲೆಯುತ್ತಿರುವಾಗ ಹೀಗೆ ವಯೋಮಿತಿಯನ್ನು ಹೆಚ್ಚಿಸುವುದರಿಂದ ದೇಶದಲ್ಲಿ ನಿರುದ್ಯೋಗ ಹೆಚ್ಚುವುದಕ್ಕೆ ಸರ್ಕಾರದವರೇ ಅವಕಾಶ ಕೊಟ್ಟಂತೆ ಆಗುವುದಿಲ್ಲವೇ ?

ಶ್ರೀ ಕೆ. ವಿ. ಶಂಕರಗೌಡ.—ಅಧ್ಯಾಪಕ ವರ್ಗದಲ್ಲಿ ಆ ವಯಸ್ಸಿನವರಲ್ಲಿ ಜ್ಞಾನ ಪರಿಪಕ್ವವಾಗಿರುತ್ತದೆಂದೂ ಮತ್ತು ಅವರು ಒಳ್ಳೆಯ ನುರಿತ ಉಪಾಧ್ಯಾಯರಾಗಿರುತ್ತಾರೆಂದೂ ಈ ತೀರ್ಮಾನಕ್ಕೆ ಬರಲಾಗಿದೆ.

ಶ್ರೀ ಎಚ್. ಬಿ. ಪ್ರಾಣೇಶಯ್ಯ.—ಕೆಲವರನ್ನು ಅಧ್ಯಾಪಕ ವರ್ಗದಲ್ಲಿ 58ಕ್ಕೆ ಹೆಚ್ಚಿಸಿ, ಇನ್ನು ಕೆಲವರನ್ನು 55 ವರ್ಷಕ್ಕೆ ರಿಟೈರಾಗಬೇಕು ಅಂದರೆ ಈ 55ಕ್ಕೆ ರಿಟೈರಾಗತಕ್ಕವರ ಜ್ಞಾನವನ್ನು ಹೆಚ್ಚಿರುವುದಿಲ್ಲವೇ, ಅವರು ಒಳ್ಳೆಯ ನುರಿತ ಅಧ್ಯಾಪಕರಾಗಿರುವುದಿಲ್ಲವೇ ! ಈ ನಿವೃತ್ತಿಗೆ ಕೇವಲ ಅವರ ಸಂಬಳವೊಂದೇ ಮುಖ್ಯವೋ ಅಥವಾ ಅವರ ಬುದ್ಧಿಯ ಮಟ್ಟ ಮುಖ್ಯವೋ ?

ಶ್ರೀ ಕೆ. ವಿ. ಶಂಕರಗೌಡ.—ಪಾಠ್ಯ ನದನ್ಯಂಗೆ ಗೊತ್ತಿರುವಂತೆ ಸಾವು ನಿರುದ್ಯೋಗದ ಕಡೆಗೂ ಸ್ವಲ್ಪ ಗಮನ ಕೊಡಬೇಕಾಗಿದೆ.

Smt. WINNIFRED F. FERNANDES.—What is the reason for not having uniform rules with regard to the age of retirement for all teachers ?

Sri K. V. SHANKARA GOWDA.—Depending upon the various circumstances, nature of service, emoluments and salaries given to them, these rules have been adopted.

ಶ್ರೀಮತಿ ನಾಗರತ್ನಮ್ಮ ಹಿರೇಮಠ್.—ವ್ಯವಸಾಯದ ವಿಶ್ವವಿದ್ಯಾನಿಲಯದಲ್ಲಿ ನಿವೃತ್ತಿಯ ಅವಧಿಯನ್ನು 60 ವರ್ಷಕ್ಕೆ ಏರಿಸಿದ್ದಾರೆ. ಇನ್ನುಳಿದ ವಿಶ್ವವಿದ್ಯಾನಿಲಯಗಳಲ್ಲಿ ಕೆಲವರಿಗೆ 55, ಇನ್ನು ಕೆಲವರಿಗೆ 58 ವರ್ಷ ಹೀಗೆಲ್ಲಾ ಮಾಡಿದ್ದಾರೆ ಇದು ಯಾವ ನ್ಯಾಯ ಈ ತಾರತಮ್ಯವೇಕೆ ?

ಶ್ರೀ ಕೆ. ವಿ. ಶಂಕರಗೌಡ.—ವ್ಯವಸಾಯದ ಕಾಲೇಜಿನ ವಿಚಾರ ನನ್ನ ಗಮನಕ್ಕೆ ಬಂದಿಲ್ಲ.

ಶ್ರೀಮತಿ ನಾಗರತ್ನಮ್ಮ ಹಿರೇಮಠ್.—ತಮ್ಮ ಗಮನಕ್ಕೆ ಬರದೆ ಅದು ಹೇಗೆ ಮಾಡುವುದಕ್ಕೆ ಸಾಧ್ಯ !

ಶ್ರೀ ಕೆ. ವಿ. ಶಂಕರಗೌಡ.—ನಾನು ಅದನ್ನು ವಿಚಾರ ಮಾಡುತ್ತೇನೆ.

ಶ್ರೀ ತಿರುಮಲದೇವರಾಯ.—ಟ್ರೈನ್ಡ್ ಟೀಚರ್ಸ್ ಸಿಕ್ಕುವುದು ಕಷ್ಟವಾದ್ದರಿಂದ ಇವರಿಗೆ ಎಕ್ಸ್‌ಟೆನ್‌ಷನ್ ಕೊಡುವುದು ಒಳ್ಳೆಯದಲ್ಲವೇ ?

ಶ್ರೀ ಕೆ. ವಿ. ಶಂಕರಗೌಡ.—ಇಲ್ಲಿ ಎಕ್ಸ್‌ಟೆನ್‌ಷನ್ ಪ್ರಶ್ನೆ ಬರುವುದಿಲ್ಲ. ಇಲ್ಲಿ ಈಗ ಚರ್ಚೆ ಆಗುತ್ತಿರುವುದು ಸರ್ವೀಸ್‌ನಲ್ಲಿರಬೇಕಾದ ವಯೋಮಿತಿ ವಿಚಾರ.

Sri B. P. GANGADHAR.—Is it not a paradox to say that to create employments to the unemployed, in Technical Colleges or institutions we are extending the age limit as 58 ?

Sri K. V. SHANKARA GOWDA.—I am sorry, Sir, the hon'ble member should be more attentive. The age of superannuation in the Technical Colleges is only 55. The retirement age is fixed at 55 because we want to give employment to the unemployed.

ಶ್ರೀ ಎಸ್. ಶಿವಪ್ಪ.—ಒಂದು ವಿಶ್ವವಿದ್ಯಾನಿಲಯ ಅದು ಬೆಂಗಳೂರು ವಿಶ್ವವಿದ್ಯಾನಿಲಯದ ಅಧೀನದಲ್ಲೇ ಇರಲಿ ಅಥವಾ ಬೇರೊಂದು ವಿಶ್ವವಿದ್ಯಾನಿಲಯದ ಅಧೀನದಲ್ಲೇ ಇರಲಿ ಅಲ್ಲಿ ಒಂದೇ ರೀತಿಯ ವಯೋಮಿತಿಯನ್ನು 58ಕ್ಕೆ ಅನುಗುಣವಾಗಿ ಇಡುವುದಕ್ಕೆ ಏನು ತೊಂದರೆ ಇದೆ ?

ಶ್ರೀ ಕೆ. ವಿ. ಶಂಕರಗೌಡ.—ವಿಶ್ವವಿದ್ಯಾನಿಲಯದ ಅಧೀನದಲ್ಲಿರತಕ್ಕ ಕಡೆ ವಯೋಮಿತಿಯನ್ನು 58 ವರ್ಷಗಳಿಗೆ ನಿಗದಿ ಮಾಡಲಾಗಿದೆಯಲ್ಲಾ ?

ಶ್ರೀ ಎಸ್. ಶಿವಪ್ಪ.—ಈಗ ವಿಶ್ವವಿದ್ಯಾನಿಲಯಕ್ಕೆ ಸೇರಿದಂಥ ಕಾಲೇಜುಗಳೂ ಇವೆ. ಸರ್ಕಾರಕ್ಕೆ ಸೇರಿದಂಥ ನೇರವಾದ ಕಾಲೇಜುಗಳೂ ಇವೆ. ಅಕಾಡಮಿಕ್ ಕಂಟ್ರೋಲ್ ವಿಶ್ವವಿದ್ಯಾನಿಲಯದಲ್ಲದೆ. ವಿಶ್ವವಿದ್ಯಾನಿಲಯದ ಅಡಳಿತದಲ್ಲಿರುವ ಕಾಲೇಜುಗಳೂ ಸರ್ಕಾರದ ಅಡಳಿತದಲ್ಲಿರುವ ಕಾಲೇಜುಗಳೂ ಅಕಾಡಮಿಕ್ ಕಂಟ್ರೋಲ್‌ನಲ್ಲಿ ಎಲ್ಲವೂ ಒಂದೇ ಮಟ್ಟದಲ್ಲಿವೆ. ಕಾಲೇಜುಗಳು ವಿಶ್ವವಿದ್ಯಾನಿಲಯದ ಅಡಳಿತದಲ್ಲಿರಲಿ ಅಥವಾ ಸರ್ಕಾರದ ಅಡಳಿತದಲ್ಲಿರಲಿ, ಅಲ್ಲಿರತಕ್ಕ ಅಧ್ಯಾಪಕರೆಲ್ಲರಿಗೂ ನಿವೃತ್ತಿ ವಯಸ್ಸಿನಲ್ಲಿ 58 ವರ್ಷಗಳೆಂಬುದಾಗಿ ಪರಿಮಿತಿ ನಿರ್ಧರಪಡಿಸುವುದು ಸೂಕ್ತವಲ್ಲವೇ ?

ಶ್ರೀ ಕೆ. ವಿ. ಶಂಕರಗೌಡ.—ಅದನ್ನು ಈಗಲೇ ಸೂಕ್ತವೆಂದು ಹೇಳುವುದಕ್ಕೆ ಸಾಧ್ಯವಿಲ್ಲ. ಮಾನ್ಯ ಸದಸ್ಯರ ಸಲಹೆಯನ್ನು ಮುಂದೆ ಪರಿಶೀಲನೆಮಾಡಬಹುದು.

Government Dispensary at Aland

111. **Sri DIGAMBARA RAO B. KALMANKAR** (Aland).—

Will the Minister for Health and Housing be pleased to state :—

(*a*) whether there is a Government Dispensary at Aland ;

(*b*) whether they have sanctioned a scheme to convert it into a General Hospital including maternity home ;

(*c*) if so, when it would be taken up and if already taken up what is its progress ?

A.—**Sri K. PUTTASWAMY** (Minister for Health and Housing).—

(*a*) Yes.
(*b*) No.
(*c*) Does not arise in view of reply to clause (*b*) above.

Sri DIGAMBARA RAO B. KALMANKAR.—May I know whether there was any proposal to convert the Government Dispensary into a General Hospital ?

Sri K. PUTTASWAMY.—I have already said in the answer as 'Yes'.

Sri DIGAMBARA RAO B. KALMANKAR.—May I know whether there are any representations made to the Hon'ble Minister ?

Sri K. PUTTASWAMY.—Representations are being made to convert it into General Hospital.

Sri DIGAMBARA RAO B. KALMANKAR.—May I know whether the Government intends to include it in the next year's budget ?

Sri K. PUTTASWAMY.—Sir, it is rather very difficult to give any assurance to the Hon'ble member since the budget provision is so meagre. Therefore, I cannot say anything at this stage.

ಶ್ರೀ ಕೆ. ಎಂ. ತಮ್ಮಯ್ಯ.—ದೊಡ್ಡ ದೊಡ್ಡ ತಾಲ್ಲೂಕು ಹೆಡ್ ಕ್ವಾರ್ಟರುಗಳಲ್ಲಿ ಲೋಕರ್ ಡಿಸ್‌ಪೆನ್ಸರಿಗಳಿದ್ದರೂ ಅವುಗಳಿಂದ ಜನರಿಗೆ ಏನೂ ಅನುಕೂಲವಾಗಿಲ್ಲ. ಆದ್ದರಿಂದ ಅವನ್ನು ಅಭಿವೃದ್ಧಿಪಡಿಸುವುದಕ್ಕೆ ಸರ್ಕಾರದಲ್ಲಿ ಏನಾದರೂ ಸ್ಕೀಂ ಇದೆಯೇ ?